# ರಾಮಕೃಷ್ಣ ಸುದ್ದಿ ಸಂಚಯ

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com Email : ho@ramakrishnacredit.com

ಸಂಪುಟ : VII ಸಂಚಿಕೆ : 2 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಜುಲೈ-ಸಪ್ಟೆಂಬರ್ 2021


## ಅಧ್ಯಕ್ಷರ ಮಾತು



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

## ರೂ.600 ಕೋಟಿಯನ್ನು ಮೀರಿದ ಒಟ್ಟು ವ್ಯವಹಾರ

ದಿನಾಂಕ 30.09.2021ಕ್ಕೆ ರೂ.332 ಕೋಟಿ ಠೇವಣಿ, ರೂ.282 ಕೋಟಿ ಸಾಲದೊಂದಿಗೆ ಒಟ್ಟು ವ್ಯವಹಾರ ರೂ.614 ಕೋಟಿಯನ್ನು ಮೀರಿದೆ, ಇದನ್ನು 30.09.2020ಕ್ಕೆ ಹೋಲಿಸುವಾಗ ವ್ಯವಹಾರದಲ್ಲಿ ರೂ.128 ಕೋಟಿ ಹೆಚ್ಚಳವಾಗಿ, (ಠೇವಣಿ ರೂ.69 ಕೋಟಿ ಮತ್ತು ಸಾಲ ರೂ.59 ಕೋಟಿ) ಶೇ.26.33 ವೃದ್ಧಿಯಾಗಿರುತ್ತದೆ. ನಿವ್ವಳ ಲಾಭ ರೂ.2.83 ಕೋಟಿಯಾಗಿದ್ದು, 30.09.2020ಕ್ಕೆ ಶೇ.0.08 ಇದ್ದ Gross NPA, 30.09.2021ಕ್ಕೆ ಶೇ.0.05 ಆಗಿ, Net NPA (ಅನುತ್ಪಾದಕ ಆಸ್ತಿ) ಶೂನ್ಯ ಪ್ರಮಾಣದಲ್ಲಿರುತ್ತದೆ. ಕೋವಿಡ್-19ರ, 2ನೇ ಅಲೆಯ ಆತಂಕದ ನಡುವೆಯೂ ಕೂಡ 2021-22ನೇ ಸಾಲಿನ ಮೊದಲ ಅರ್ಧ ವಾರ್ಷಿಕ ಅವಧಿಗೆ ಅತ್ಯುತ್ತಮ ಪ್ರಗತಿಯನ್ನು ಸಾಧಿಸಿದ್ದೇವೆ ಎಂದು ತಿಳಿಸಲು ಸಂತೋಷಪಡುತ್ತೇವೆ.

**ಪ್ರಗತಿಯ ಪಕ್ಷಿನೋಟ ಈ ಕೆಳಗಿನಂತಿದೆ.**

(ರೂ. ಕೋಟಿಗಳಲ್ಲಿ)

| ಕ್ರ. ಸಂ. | ಕಾರ್ಯ ವಿಭಾಗ | ಸಪ್ಟೆಂಬರ್ 2020ಕ್ಕೆ ಇದ್ದಂತೆ (ರೂ) | ಸಪ್ಟೆಂಬರ್ 2021ಕ್ಕೆ ಇದ್ದಂತೆ (ರೂ) | ಹೆಚ್ಚಳ (ರೂ) | ಶೇ. ವೃದ್ಧಿ |
|---|---|---|---|---|---|
| 1 | ಠೇವಣಾತಿ | ರೂ.263 ಕೋಟಿ | ರೂ.332 ಕೋಟಿ | ರೂ.69 ಕೋಟಿ | 26% |
| 2 | ಸಾಲ ಮತ್ತು ಮುಂಗಡ | ರೂ.223 ಕೋಟಿ | ರೂ.282 ಕೋಟಿ | ರೂ.59 ಕೋಟಿ | 26% |
| 3 | ಒಟ್ಟು ವ್ಯವಹಾರ | ರೂ.486 ಕೋಟಿ | ರೂ.614 ಕೋಟಿ | ರೂ.128 ಕೋಟಿ | 26% |
| 4 | ನಿವ್ವಳ ಲಾಭ | ರೂ.2.68 ಕೋಟಿ | ರೂ.2.83 ಕೋಟಿ | ರೂ.15 ಲಕ್ಷ | 6% |
| 5 | ಅನುತ್ಪಾದಕ ಆಸ್ತಿ (Absolute) | ರೂ.15.70 ಲಕ್ಷ | ರೂ.15 ಲಕ್ಷ | ರೂ.0.70 ಲಕ್ಷ (ಕಡಿಮೆ) | |
| | ಶೇಕಡಾವಾರು | 0.08% | 0.05% | – | – |
| 6 | ನಿವ್ವಳ ಅನುತ್ಪಾದಕ ಆಸ್ತಿ | 0% | 0% | – | – |

1. ಸಂಘದ ಒಟ್ಟು ಠೇವಣಾತಿಯು ₹332 ಕೋಟಿಯಷ್ಟಿದ್ದು, 2020ರ ಸಪ್ಟೆಂಬರ್‌ಗಿಂತ ₹69 ಕೋಟಿ ಹೆಚ್ಚಳಗೊಂಡು, ಶೇ.26ರಷ್ಟು ವೃದ್ಧಿಗೊಂಡಿರುವುದು,
2. ಹೊರಬಾಕಿ ಸಾಲವು ₹282 ಕೋಟಿಯಷ್ಟಿದ್ದು, 2020ರ ಸಪ್ಟೆಂಬರ್‌ಗಿಂತ ₹59 ಕೋಟಿ ಹೆಚ್ಚಳಗೊಂಡು ಶೇ.26ರಷ್ಟು ವೃದ್ಧಿಗೊಂಡಿರುವುದು,
3. ಒಟ್ಟು ವ್ಯವಹಾರವು ₹614 ಕೋಟಿಯಷ್ಟಿದ್ದು, 2020ರ ಸಪ್ಟೆಂಬರ್‌ಗಿಂತ ₹128ಕೋಟಿ ಹೆಚ್ಚಳಗೊಂಡು, ಶೇ.26ರಷ್ಟು ವೃದ್ಧಿಯಾಗಿರುವುದು,
4. 30.09.2020ಕ್ಕೆ ಸಂಘವು ₹2.68 ಕೋಟಿ ನಿವ್ವಳ ಲಾಭ ಗಳಿಸಿದ್ದು, 30.09.2021ಕ್ಕೆ ನಿವ್ವಳ ಲಾಭವು ₹2.83 ಕೋಟಿಯಾಗಿ, ಈ ಅವಧಿಯಲ್ಲಿ ಲಾಭವು ₹15 ಲಕ್ಷ ಹೆಚ್ಚಳವಾಗಿ ಶೇ.6ರಷ್ಟು ವೃದ್ಧಿಯಾಗಿರುವುದು.

ಸಂಘದ ಸದಸ್ಯ ಠೇವಣಿದಾರರು ತೋರಿರುವ ಅದಮ್ಯ ವಿಶ್ವಾಸ, ಸಾಲಗಾರ ಸದಸ್ಯರ ಸಹಕಾರ, ಸಂಘದ ಆಡಳಿತ ಮಂಡಳಿಯ ಮಾರ್ಗದರ್ಶನ, ಎಲ್ಲಾ ಶಾಖಾ ಸಲಹಾ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳ ಸಹಭಾಗಿತ್ವ, ಸಂಘದ ಶಾಖಾಧಿಕಾರಿಗಳು ಮತ್ತು ಸಿಬ್ಬಂದಿಗಳ ಅಪಾರ ಶ್ರಮ ಹಾಗೂ ಪ್ರಾಮಾಣಿಕ ಸೇವೆ, ಈ ಅಸಾಮಾನ್ಯ ಸಂಕಷ್ಟದ ದಿನಗಳಲ್ಲೂ, ಸಂಘದ ವ್ಯವಹಾರ ಅತ್ಯುತ್ತಮವಾಗಿ ವೃದ್ಧಿಯಾಗಲು ಕಾರಣವಾಗಿದೆ. ನಿಮಗೆಲ್ಲರಿಗೂ ನನ್ನ ವೈಯಕ್ತಿಕ ನೆಲೆಯಲ್ಲಿ ಹಾಗೂ ಸಂಘದ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸುತ್ತಿದ್ದೇನೆ.

ಮುಂದಿನ ದಿನಗಳಲ್ಲೂ ಕೂಡ ತಮ್ಮೆಲ್ಲರ ಇದೇ ರೀತಿಯ ಸಹಕಾರದೊಂದಿಗೆ, ಸಂಘವನ್ನು ಇನ್ನಷ್ಟು ಪ್ರಗತಿ ಮತ್ತು ಸದೃಢತೆಯತ್ತ ಮುನ್ನಡೆಸಲು ಸಾಧ್ಯವಾಗುವುದೆಂದು ಭರವಸೆಯನ್ನು ವ್ಯಕ್ತಪಡಿಸುತ್ತೇನೆ.

**(ಕೆ. ಜೈರಾಜ್ ಬಿ. ರೈ)**
**ಅಧ್ಯಕ್ಷರು**

## ಸಂಘದಿಂದ ಉಡುಪಿ ಜಿಲ್ಲಾಡಳಿತಕ್ಕೆ ಕೋವಿಡ್-19 ನಿರ್ವಹಣೆಗೆ ಸಹಕಾರ



ಕೋವಿಡ್-19, ಸಾಂಕ್ರಾಮಿಕ ತಡೆಗೆ, ಉಡುಪಿ ಜಿಲ್ಲಾಡಳಿತವು ಕೈಗೊಳ್ಳುವ ಆರೋಗ್ಯ ಮೂಲ ಸೌಕರ್ಯಗಳನ್ನು ವೃದ್ಧಿಸುವ ಕಾರ್ಯಯೋಜನೆಗಳಿಗೆ ಸಹಕಾರಿಯಾಗುವಂತೆ, ಸಂಘದ ವತಿಯಿಂದ ರೂ.1 ಲಕ್ಷ (ರೂಪಾಯಿ ಒಂದು ಲಕ್ಷ ಮಾತ್ರ) ದೇಣಿಗೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು, ಉಡುಪಿ ಜಿಲ್ಲಾಧಿಕಾರಿಯವರಾದ ಶ್ರೀ ಜಿ. ಜಗದೀಶ್, ಐ.ಎ.ಎಸ್.ರವರಿಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರಾದ ಶ್ರೀ ರವೀಂದ್ರನಾಥ ಜಿ. ಹೆಗ್ಡೆ ಮತ್ತು ಪ್ರಭಾರ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ.ಯವರು ಉಪಸ್ಥಿತರಿದ್ದರು. ಇದೇ ಉದ್ದೇಶಕ್ಕಾಗಿ ದಕ್ಷಿಣ ಕನ್ನಡ ಜಿಲ್ಲಾಡಳಿತಕ್ಕೆ ಕೂಡ ದೇಣಿಗೆಯನ್ನು ನೀಡಲಾಗಿರುತ್ತದೆ.

## ಅಭಿನಂದನೆಗಳು



ದಿನಾಂಕ 06.08.2021ರಂದು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ, ನಿರ್ದೇಶಕರಾದ ಬೆಳ್ಳಿಪಾಡಿ ಶ್ರೀ ಪ್ರಸಾದ್ ಕೌಶಲ್ ಶೆಟ್ಟಿ ಮತ್ತು ಕಡಬ ಶಾಖಾಧಿಕಾರಿ ಶ್ರೀ ದಿನೇಶ್ ಶೆಟ್ಟಿಯವರು ಸಂಘದ ಕಡಬ ಶಾಖೆಯ ಕಟ್ಟಡ ಮಾಲಕತ್ವದ, ಸೈಂಟ್ ಜೋಕಿಮ್ಸ್ ಚರ್ಚ್ ಕಡಬ ಇದರ ಹೊಸ ಧರ್ಮಗುರುಗಳಾದ ಫಾದರ್ ಅರುಣ್ ವಿಲ್ಸನ್ ಲೋಬೋ ಇವರನ್ನು ಭೇಟಿ ನೀಡಿ ಹೂಗುಚ್ಛ ನೀಡಿ ಅಭಿನಂದಿಸಿದರು.

## ಹುಟ್ಟು ಹಬ್ಬದ ಶುಭಾಶಯಗಳು

**ಅಕ್ಟೋಬರ್ 2021ರಿಂದ, ಡಿಸೆಂಬರ್ 2021ರ ಅವಧಿಯಲ್ಲಿ ಜನ್ಮದಿನವನ್ನು ಆಚರಿಸುವ ತಮಗೆಲ್ಲರಿಗೂ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು**

| ಸಿಬ್ಬಂದಿಗಳ ಹೆಸರು ಮತ್ತು ಶಾಖೆ | |
|---|---|
| ಶ್ರೀಮತಿ ಯಶೋಧ ನಾೈಕ್ | ಮುಲ್ಕಿ |
| ಶ್ರೀ ಅಣ್ಣಪ್ಪ ಶೆಟ್ಟಿ | ಉಡುಪಿ |
| ಶ್ರೀಮತಿ ಸವಿತಾ ಪೂಂಜಾ | ಚಿಲಿಂಬಿ |
| ಶ್ರೀ ಸಂತೋಷ್ | ಕುಂದಾಪುರ |
| ಶ್ರೀಮತಿ ನಂದಿತಾ ಆಚಾರ್ಯ | ಹಂಪನಕಟ್ಟೆ |
| ಕು. ಪೂರ್ಣಿಮ | ಹೆಬ್ರಿ |
| ಶ್ರೀ ರಕ್ಷಿತ್ ಆರ್. ಶೆಟ್ಟಿ | ವೆಲೆನ್ಸೀಯಾ |
| ಶ್ರೀಮತಿ ಸೌಮ್ಯರಾಣಿ | ವೆಲೆನ್ಸೀಯಾ |
| ಶ್ರೀ ಧನಂಜಯ ಕುಮಾರ್ | ಸುರತ್ಕಲ್ |
| ಶ್ರೀ ಶಮಂತ್ ಟಿ. ರೈ | ಕೇಂದ್ರ ಕಛೇರಿ |
| ಕು. ಸುಸ್ಮಿತ | ಉಡುಪಿ |
| ಶ್ರೀಮತಿ ಕೌಸ್ತುಭ ಶೆಟ್ಟಿ | ಮುಲ್ಕಿ |

# ಸಿಬ್ಬಂದಿಗಳಿಗೆ ಚಿನ್ನಾಭರಣ ಪರಿಶೀಲನಾ ತರಬೇತಿ ಕಾರ್ಯಾಗಾರ




ಸಂಘದ ಶಾಖಾಧಿಕಾರಿಗಳಿಗೆ ಮತ್ತು ಇತರ ಅಧಿಕಾರಿಗಳಿಗೆ 4 ದಿನಗಳ ಚಿನ್ನಾಭರಣ ಪರಿಶೀಲನಾ ಮತ್ತು ಮೌಲ್ಯಮಾಪನಾ ತರಬೇತಿ ಕಾರ್ಯಾಗಾರವನ್ನು ಮೆ। ಗೋಲ್ಡ್‌ಸ್ಮಿತ್ ಅಕಾಡೆಮಿ ಪ್ರೈವೇಟ್ ಲಿಮಿಟೆಡ್, ಮಧುರೈ ಇವರ ಮೂಲಕ ಆಯೋಜಿಸಲಾಗಿತ್ತು.

ಈ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿದ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು, ಸಹಕಾರ ಸಂಘಗಳು ಚಿನ್ನಾಭರಣ ಸಾಲ ನೀಡುವಿಕೆಗೆ ಬಹಳ ಒತ್ತು ನೀಡುತ್ತಿವೆ. ಇಂದಿನ ಸನ್ನಿವೇಶದಲ್ಲಿ ನಕಲಿ ಚಿನ್ನಾಭರಣಗಳನ್ನು ಒತ್ತೆ ಇರಿಸಿರುವ ಪ್ರಕರಣಗಳು ಕೂಡಾ ಕಂಡುಬರುತ್ತಿವೆ. ಆದುದರಿಂದ, ಶಾಖಾಧಿಕಾರಿಗಳು ಬಹಳ ಜಾಗರೂಕತೆಯಿಂದ ಕೆಲಸ ಮಾಡಬೇಕಾಗಿದೆ. ಚಿನ್ನಾಭರಣಗಳ ಸಾಚಾತನವನ್ನು ಕಂಡುಹಿಡಿಯುವ ತಜ್ಞತೆಯು ಬೇಕಾಗುತ್ತದೆ. ಈ ನಿಟ್ಟಿನಲ್ಲಿ ಚಿನ್ನಾಭರಣಗಳ ಪರಿಶೀಲನೆಯ ಬಗ್ಗೆ ಶೈಕ್ಷಣಿಕ ಕೋರ್ಸ್ ಹೊಂದಿರುವ ಮೆ। ಗೋಲ್ಡ್‌ಸ್ಮಿತ್ ಅಕಾಡೆಮಿ ಪ್ರೈವೇಟ್ ಲಿಮಿಟೆಡ್, ಮಧುರೈರವರಿಂದ ಈ ತರಬೇತಿಯನ್ನು ಆಯೋಜಿಸಲಾಗಿದೆ ಹಾಗೂ ಈ ತರಬೇತಿಯನ್ನು ಪಡೆದ ಸಿಬ್ಬಂದಿಗಳಿಗೆ ಭಾರತ್ ಸೇವಕ್ ಸಮಾಜ್, ನವದೆಹಲಿ ರವರಿಂದ ಪ್ರಮಾಣಪತ್ರವನ್ನು ನೀಡಲಾಗುವುದು. ಈ ತರಬೇತಿ ಕಾರ್ಯಾಗಾರವು ಶಾಖಾಧಿಕಾರಿಗಳು ಮತ್ತು ಸಿಬ್ಬಂದಿಗಳು ಚಿನ್ನಾಭರಣ ಸಾಲ ನೀಡುವಾಗ ತುಂಬಾ ಪ್ರಯೋಜನಕರವಾಗಲಿದೆ, ಇಂತಹ ತರಬೇತಿ ಕಾರ್ಯಾಗಾರವು ಕರ್ನಾಟಕ ರಾಜ್ಯದ ಪತ್ತಿನ ಸಹಕಾರಿ ಸಂಘಗಳ ಕ್ಷೇತ್ರದಲ್ಲಿ ಇದೇ ಪ್ರಪ್ರಥಮ ಬಾರಿಗೆ ಜರಗಿರುತ್ತದೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಪ್ರವೀಣ್ ಬಿ. ನಾಯಕ್, ನಿರ್ದೇಶಕರಾದ ಸರ್ವಶ್ರೀ ಸೀತಾರಾಮ ರೈ ಸವಣೂರು, ಡಾ। ಕೆ. ಸುಭಾಶ್ಚಂದ್ರ ಶೆಟ್ಟಿ, ಪಿ. ಶಿವರಾಮ ಅಡ್ಯಂತಾಯ, ಯಂ. ರಾಮಯ ಶೆಟ್ಟಿ, ಬೆಳ್ಳಿಪ್ಪಾಡಿ ಪ್ರಸಾದ್ ಕೌಶಲ್ ಶೆಟ್ಟಿ, ಡಾ। ಎಂ ಸುಧಾಕರ ಶೆಟ್ಟಿ ಮತ್ತು ಪ್ರಭಾರ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ. ಕೆ. ಯವರು ಉಪಸ್ಥಿತರಿದ್ದರು.

ಸಿಬ್ಬಂದಿ ತರಬೇತಿ ಕಾರ್ಯಕ್ರಮವನ್ನು ಗೋಲ್ಡ್‌ಸ್ಮಿತ್ ಅಕಾಡೆಮಿ ಪ್ರೈವೇಟ್ ಲಿಮಿಟೆಡ್‌ನ ಆಯೋಜಕರಾದ ಶ್ರೀ ವರುಣ್‌ದೇವ, ಶ್ರೀ ರಾಮಮೂರ್ತಿ, ಶ್ರೀ ಗುರು ಆನಂದನ್ ಹಾಗೂ ಶ್ರೀ ಉಮೇಶ್ ರಾವ್‌ರವರು ನಡೆಸಿಕೊಟ್ಟರು. ದ.ಕ. ಜಿಲ್ಲಾ ಚಿನ್ನದ ಕೆಲಸಗಾರರ ಸಂಘದ ಕಾರ್ಯದರ್ಶಿ – ಶ್ರೀ ಪ್ರಕಾಶ್ ಅಲೆಜಿ, ಕೋಶಾಧಿಕಾರಿ – ಶ್ರೀ ಪ್ರಕಾಶ್ ಕುಂಟಾಡಿ, ಸಂಘದ ಚಿನ್ನಾಭರಣ ಸರಾಫರಾದ ಶ್ರೀ ಉಮೇಶ್ ಆಚಾರ್ಯರವರು ತರಬೇತಿಯ ಆಯೋಜನೆಗೆ ಸಹಕರಿಸಿದರು.

# ಸಿಬ್ಬಂದಿಗಳಿಗೆ ಎಚ್.ಡಿ.ಸಿ.ಎಂ. ಕೋರ್ಸ್




ಸಂಘವು ತನ್ನ ಸಿಬ್ಬಂದಿಗಳಿಗಾಗಿ, ದೇಶದ ಸಹಕಾರಿ ಶಿಕ್ಷಣದ ಮುಂಚೂಣಿಯ ಸಂಸ್ಥೆಯಾದ ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಕೋ–ಓಪರೇಟಿವ್ ಮೇನೇಜ್‌ಮೆಂಟ್ ಬೆಂಗಳೂರು (ಆರ್.ಐ.ಸಿ.ಎಂ) ಇವರಿಂದ ಆಯೋಜಿಸಿರುವ, ಹೈಯರ್ ಡಿಪ್ಲೊಮಾ ಇನ್ ಕೋ–ಓಪರೇಟಿವ್ ಮೇನೇಜ್‌ಮೆಂಟ್ ಕೋರ್ಸನ್ನು, ಸಂಘದ ಕೇಂದ್ರ ಕಛೇರಿಯಲ್ಲಿ ದಿನಾಂಕ 02.10.2021ರಂದು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಉದ್ಘಾಟಿಸಿ, ಸಿಬ್ಬಂದಿಗಳಿಗೆ ತರಬೇತಿಯ ಮಹತ್ವವನ್ನು ತಿಳಿಸುತ್ತಾ, ತರಬೇತಿಯಿಂದ ಪಡೆದ ಜ್ಞಾನವನ್ನು ಸದುಪಯೋಗ ಪಡಿಸಿಕೊಂಡು ತಮ್ಮ ಕೆಲಸಗಳನ್ನು ಅರಿತುಕೊಂಡು, ವೃತ್ತಿಪರತೆಯಿಂದ ಕರ್ತವ್ಯವನ್ನು ನಿರ್ವಹಿಸಲು ಸಿಬ್ಬಂದಿಗಳಿಗೆ ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಆರ್.ಐ.ಸಿ.ಎಂ.ನ ಪ್ರೊಜೆಕ್ಟ್ ಕೋ–ಆಡಿನೇಟರ್ ಪ್ರಾಧ್ಯಾಪಕ ಶ್ರೀ ಪಿ.ಎನ್. ಸುರೇಶ್‌ರವರು, ಸಂಘವು ಸಿಬ್ಬಂದಿಗಳ ತರಬೇತಿಗೆ ನೀಡುತ್ತಿರುವ ಮಹತ್ವವನ್ನು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಸಂಘದ 20 ಶಾಖೆಗಳ ಸಿಬ್ಬಂದಿಗಳು ಭಾಗವಹಿಸಿದರು. ಸಭೆಯ ಆರಂಭದಲ್ಲಿ ಸಿಬ್ಬಂದಿ ಶ್ರೀಮತಿ ಅಶ್ವಿನಿ ಡಿ. ರೈಯವರು ಪ್ರಾರ್ಥಿಸಿ, ಪ್ರಭಾರ ಮಹಾಪ್ರಬಂಧಕ ಶ್ರೀ ಗಣೇಶ್ ಜಿ.ಕೆ.ಯವರು ಸ್ವಾಗತಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಮುಖ್ಯ ವ್ಯವಸ್ಥಾಪಕ ಶ್ರೀ ಮೋಹನ್‌ದಾಸ್ ಶೆಟ್ಟಿಯವರು ವಂದನಾರ್ಪಣೆಯನ್ನು ಸಲ್ಲಿಸಿದರು.

# ಶ್ರದ್ಧಾಂಜಲಿ



**ಎಸ್.ಅಮರನಾಥ ಹೆಗ್ಡೆ**
ಮುಖ್ಯ ವ್ಯವಸ್ಥಾಪಕರು
ಬ್ರಹ್ಮಾವರ ಶಾಖೆ



ಸಂಘದಲ್ಲಿ 26 ವರ್ಷಗಳ ಕಾಲ ಸೇವೆ ಸಲ್ಲಿಸಿ, ಸಂಘಕ್ಕೆ ಸಲ್ಲಿಸಿರುವ ಅನುಪಮ ಸೇವೆಯನ್ನು ಸ್ಮರಿಸಿಕೊಂಡು ದಿನಾಂಕ 29.08.2021ರಂದು ದೈವಾಧೀನರಾದ ಬ್ರಹ್ಮಾವರ ಶಾಖೆಯ ಶಾಖಾಧಿಕಾರಿ ದಿ| ಎಸ್. ಅಮರನಾಥ ಹೆಗ್ಡೆಯವರಿಗೆ, ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಮತ್ತು ಸಿಬ್ಬಂದಿಗಳು ದಿನಾಂಕ 31.08.2021ರಂದು ನುಡಿ ನಮನ ಸಲ್ಲಿಸಿ, ಅಗಲಿದ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

- ಶ್ರೀ ಕೆ. ರಾಮಚಂದ್ರ (ಸುರತ್ಕಲ್ ಶಾಖೆಯ ಶಾಖಾಧಿಕಾರಿ ಶ್ರೀಮತಿ ತುಳಸಿಯವರ ತಂದೆ)ರವರ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಲಾಯಿತು.

**ಅಗಲಿದ ದಿವ್ಯ ಚೇತನಗಳಿಗೆ ಚಿರಶಾಂತಿ ಕೋರಿಕೊಂಡು, ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ.**

## ಅಭಿನಂದನೆಗಳು

ಸಂಘದ ವಿಟ್ಲ ಶಾಖೆಯ ಸಿಬ್ಬಂದಿ ಶ್ರೀ ಹರೀಶ್ ಮೂಲ್ಯರವರು ಗಂಡು ಮಗುವಿನ ತಂದೆಯಾಗಿದ್ದಾರೆ. ಇವರಿಗೆ ಹಾರ್ದಿಕ ಅಭಿನಂದನೆಗಳು.

## ಸಂಘದ ವಾರ್ಷಿಕ ಮಹಾಸಭೆಯ ದಿನಾಂಕ ನಿಗದಿ

ನಮ್ಮ ಸಂಘದ 2020–21ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು **28.11.2021ನೇ ಆದಿತ್ಯವಾರ ಪೂರ್ವಾಹ್ನ ಗಂಟೆ 11:00ಕ್ಕೆ "ಮಂಗಳೂರಿನ ಲೇಡಿಹಿಲ್‌ನಲ್ಲಿರುವ ಉರ್ವ ಚರ್ಚ್ ಸೆಂಟನರಿ ಹಾಲ್"**ನಲ್ಲಿ ಜರಗಿಸಲಾಗುವುದು. ಸಭೆಯ ನೋಟೀಸನ್ನು ಅರ್ಹ ಸದಸ್ಯರಿಗೆ ಕಳುಹಿಸಲಾಗುವುದು.

Private Circulation only

**BOOK-POST**

**To,**

If not delivered please return to :
**SRI RAMAKRISHNA CREDIT CO-OP. SOCIETY LTD.**
2nd Floor, Amruthotsava Building, Bunts Hostel Circle, Mangalore - 575 003.